ಅ) ಮಣಿಕಿಲ್ಲಾ ಓಣಿ, ಧಾರವಾಡ

1992-93 - 2 ಹೆಬ್ಬಳ್ಳ ಓಣಿ, ಧಾರವಾಡ

1994-95 - 1 ಶೀರಾಮನಗರ, ಧಾರವಾಡ.

ಒಟ್ಟು - 3

ಇ) ಈಗ ಸಾಮೂಹಿಕ ದೂರದರ್ಶನ ಸೆಟ್ಟುಗಳ ಸುವ್ಯವಸ್ಥೆ, ದುರಸ್ತಿ ಮತ್ತು ಭದ್ರತೆಯನ್ನು ಆಯಾ ಜಿಲ್ಲಾ ಪಂಚಾಯತ್, ನಗರಸಭೆ, ಪುರಸಭೆ, ಮಹಾನಗರಪಾಲಿಕೆ ವಶಕ್ಕೆ ವಹಿಸಿಕೊಡಲಾಗಿದೆ.

ವರ್ಕ್ ಚಾರ್ಜ್ ನೌಕರರ ಸಂಖ್ಯೆ

2360 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆಯಲ್ಲಿ ವರ್ಕ್‌ಚಾರ್ಜ್ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಕೆಲಸಗಾರರ ಸಂಖ್ಯೆ ಎಷ್ಟು? ತುಮಕೂರು ಜಿಲ್ಲೆಯಲ್ಲಿರುವ ಈ ಕೆಲಸಗಾರರ ಸಂಖ್ಯೆಯೆಷ್ಟು?*

ಆ) *ಈ ಕೆಲಸಗಾರರನ್ನು ಖಾಯಂಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?*

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಮಂತ್ರಿಗಳು) :

ಅ) ಲೋಕೋಪಯೋಗಿ ಇಲಾಖೆ ಮತ್ತು ನೀರಾವರಿ ಇಲಾಖೆಯಲ್ಲಿ 1426 ಮಂದಿ ವರ್ಕ್‌ಚಾರ್ಜ್ ಆಧಾರದ ಮೇಲೆ ಕೆಲಸ, ನಿರ್ವಹಿಸುತ್ತಿದ್ದಾರೆ. ಈ ಪೈಕಿ 99 ಮಂದಿ ತುಮಕೂರು ಜಿಲ್ಲೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

ಆ) 1195 ಮಂದಿ ವರ್ಕ್‌ಚಾರ್ಜ್ ಆಧಾರದ ಮೇಲೆ ಕೆಲಸ ಮಾಡುತ್ತಿರುವ ನೌಕರರ ಸೇವೆಯನ್ನು ಈಗಾಗಲೇ ಖಾಯಂಗೊಳಿಸಲಾಗಿದೆ. ಉಳಿದವರ ಸೇವೆಯನ್ನು ಸಕ್ರಮಗೊಳಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೋಣಿ ದುರಂತ

2539 - ಶ್ರೀ ಐ.ಎಂ. ಜಯರಾಮ ಶೆಟ್ಟಿ (ಬೈಂದೂರು) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ದೋಣಿ ದುರಂತದಲ್ಲಿ ಮಡಿದವರ ಸಂಖ್ಯೆ ಎಷ್ಟು?*

ಆ) *ದೋಣಿ ದುರಂತದಲ್ಲಿ ಮಡಿದವರಿಗೆ ಸರ್ಕಾರವು ಒದಗಿಸುತ್ತಿರುವ ಪರಿಹಾರವೇನು?*

ಶ್ರೀ ಕೆ. ಜಯಪ್ರಕಾಶ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):

ಅ) 42

ಆ) ಮೀನುಗಾರಿಕೆಯಲ್ಲಿ ತೊಡಗಿರುವಾಗ ಸಂಭವಿಸುವ ದೋಣಿ ದುರಂತಗಳಲ್ಲಿ ಮೀನುಗಾರರು ಮೃತಪಟ್ಟಲ್ಲಿ ಪ್ರಕರಣಗಳ ಶವಪರೀಕ್ಷಾ ವರದಿ, ಮರಣ ದೃಢೀಕರಣ ಪತ್ರ ಇತ್ಯಾದಿ ದಾಖಲೆಗಳನ್ನು ಪರಿಶೀಲಿಸಿ ಸಾಮೂಹಿಕ ಅಪಘಾತ ವಿಮಾ ಯೋಜನೆಯಲ್ಲಿ ರೂ. 25,000.00 ಕರ್ನಾಟಕ ರಾಜ್ಯ ಮೀನುಗಾರರ ಸಂಕಷ್ಟ ಪರಿಹಾರ ನಿಧಿಯಿಂದ ರೂ. 10,000.00 ಗಳನ್ನು ಪರಿಹಾರವಾಗಿ ಕೊಡಲಾಗುತ್ತಿದೆ.